O.S. No- 3/2019

Pw-2

ದಿನಾಂಕಃ20-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಎಸ್ ಸಿ ಕೆ ವಾದಿ ಪರ ವಕೀಲರಿಂದ-**

ನಾನು ಈ ದಿನ ನನ್ನ ಪ್ರಮಾಣಿಕೃತ ಸಾಕ್ಷಿಯ ಬದಾಲಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನನ್ನ ಮಾಹಿತಿಯ ಮೇರೆಗೆ ನಿಜವಾಗಿರುತ್ತವೆ ಅದನ್ನು ನನ್ನ ಸಾಕ್ಷಿಕೃತ ಹೇಳಿಕೆಯಂತೆ ಪರಿಗಣಿಸಬೇಕಾಗಿ ವಿನಂತಿ ಇದೆ.

**ಪಾಟೀ ಸವಾಲುಃ ಶ್ರೀ. ಎಸ್ ಪಿ ಪಿ 2 ನೇ ಪ್ರತಿವಾದಿ ಪರ ವಕೀಲರಿಂದ-**

ನಾನು 9 ನೇ ತರಗತಿ ವರೆಗೆ ವ್ಯಾಸಾಂಗ ಮಾಡಿರುತ್ತೇನೆ . ಈ ಕೇಸಿನ ವಾದಿ ನನಗೆ ದೂರಿನಿಂದ ಸಂಬಂದಿಕನಾಗಬೇಕು . ವಾದಿಯ ಖುಲ್ಲಾ ಜಾಗೆಯ ನಂಬರ 29 ಆಗಿರುತ್ತದೆ . ಅದರ ಉದ್ದ ಅಳತೆ ಪೂರ್ವ ಪಶ್ಚಿಮ 73 ಅಡಿ ಉತ್ತರ ದಕ್ಷಿಣ 65 ಅಡಿ ಇರುತ್ತದೆ . ಸದರಿ ಉದ್ದ ಆಳತೆ ನಾನು ಪಂಚಾಯತಿ ಇವರು ನನಗೆ ನೋಟಿಸು ನೀಡಿ ಸದರಿ ಖುಲ್ಲಾ ಜಾಗೆಯನ್ನು ನನ್ನ ಸಮಕ್ಷಮ ಅಳೆದಿರುತ್ತಾರೆ . ಸದರಿ ನೋಟಿಸಿನ ಪ್ರತಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವದಿಲ್ಲ . ಸದರಿ ಆಸ್ತಿ ಹಿರಿಯರ ಆಸ್ತಿಯಾಗಿದ್ದು ಮತ್ತು ಅದರ ಕಾಗದ ಪತ್ರ ಗಳು ಲಭ್ಯ ಇರುವದಿಲ್ಲ . ಪಂಚಾಯತಿ ರವರು ಅಳತೆ ಮಾಡುವ ಕಾಲಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುವದಿಲ್ಲ . ದಾವಾ ಜಾಗೆಯ ಬಗ್ಗೆ ನನಗೆ ವಯಕ್ತಿಕವಾಗಿ ಯಾವುದೇ ಮಾಹಿತಿ ಇಲ್ಲ, ವಾದಿಯ ಕೇಸಿಗೆ ಅನುಕೂಲವಾಗಲೀ ಎಂದು ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಪಾಟೀ ಸವಾಲು** ಶ್ರೀ ಸಿ ಎಸ್ ಬಿ 3 ರಿಂದ 7 , 9 ರಿಂದ 13 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ